'ಬಾ ಲೀಲಾ...' ಆಕೆ ದಿವಾನಾಖಾನೆಯ ಮಸುಕು ದೀಪದತ್ತ ಹೆಜ್ಜೆಯಿಟ್ಟಾಗ ಹೆಂಡತಿ ಹೊರಗಿನ ಕಲ್ಲು ಮೆಟ್ಟಿಲಿನ ಮೇಲೆ ಅನುಮಾನದಿಂದ ನಿಂತಳು.

'ಮೊದಲ ಸಲ ಒಂದು ಮಗುವನ್ನು ನೋಡಲು ಹೋಗುವಾಗ ನಾನೆಷ್ಟು ಬೇಜಾರು ಅನುಭವಿಸುತ್ತಿದ್ದೇನೆ...' ಆಕೆ ನುಡಿದಳು.

'ಹೊಸ ಅಮ್ಮನನ್ನು ಕರೆದುಕೊಂಡು ಬಂದಿದ್ದೇನಂತ ನಾನು ಅವನಿಗೆ ಹೇಳುತ್ತೇನೆ... ಹೊಸಬಟ್ಟೆಗಳು, ಹೊಸ ಆಟಿಕೆಗಳು ಜೊತೆಗೆ ಹೊಸ ಅಮ್ಮ'. ಅವನು ಮುಗುಳ್ನಗಲು ಪ್ರಯತ್ನಿಸುತ್ತಾ ಹೇಳಿದ.

ದಿವಾನಾಖಾನೆಯ ಎರಡು ಕಿಟಕಿಗಳ ಆಚೆ ಸಪೋಟ, ಪೇರಳೆ, ಜಾಂಪ್ ಮುಂತಾದ ಮರಗಳು ಬೆಳೆದು ನಿಂತಿರುವುದರಿಂದಲೋ ಏನೋ ಆ ನೆರಳಿನ ತುಣುಕುಗಳು ಪುಟ್ಟ ಜಮಖಾನೆಯಂತೆ

